# BDA ANNOUNCES

# ALLOTMENT OF 30'X 40' SITE TO REVENUE SITES OWNERS

## AT THE PROPOSED
## DR. SHIVARAMA KARANTH LAYOUT

**BDA will consider allotment of 30'x40' sites to owners of revenue sites purchased before 03.08.2018 located in the jurisdiction of the Dr. Shivarama Karanth Layout in the wake of acquiring of such sites for the proposed new layout.**

### CONDITIONS FOR ALLOTMENT

1. Pay the registration fee Rs. 5000/- and application fee of Rs. 500/- to the Canara Bank, BDA Extention Counter, K.P. West, Bengaluru - 560020 and submit the duly filled in applications to the same section.
2. Enclose a copy of the sale deed of revenue site and related documents with the application.
3. To be eligible for allotment of a site, you should be a domicile of Karnataka for not less than 15 years prior to the date of registration. Only person who have attained the age of 18 years are eligible to apply.
4. If the Revenue Site Holder has more than one Revenue site in his name, BDA will allot only one Revenue site.
5. You are not eligible for allotment of a site if you have already been allotted a site/house/ flat/ any other type of accommodation on ownership basis either by the erstwhile city Improvement Trust Board/ Bangalore Development Authority/ Karnataka Housing Board/ House Building Co-operative Societies or other agencies.
6. You are not eligible for allotment of a site if either in your name or in the name of your spouse or in the name of any other dependent family member, own a site/ house / flat or any type of accommodation, within the Bangalore Metropolitan area.
7. You are also not eligible for allotment of a site in case you have acquired in any part of Karnataka or anywhere in India, a site/ house at a subsidised price.

### INFORMATION FOR ALLOTTEES

1. Dimension of site limited to 30'x40' only.
2. After allotment, the allottee will have to pay full site value.
3. Please approach the allotment section of BDA without the intervention of middlemen.

**NO need to pay initial deposit towards the allotment of site.**

*BDA allotment of sites rules, 1984 will be applicable

**Holders of GPA or Agreement Deeds in favour of the Revenue Sites are not eligible for allotment.**

**Submit filled application on or before 09.08.2021**



**BANGALORE DEVELOPMENT AUTHORITY**
T. Chowdaiah Road, Kumara Park West, Bengaluru - 560 020.

# ಬಿಡಿಎ ಪ್ರಕಟಣೆ

## ರೆವಿನ್ಯೂ ನಿವೇಶನದಾರರಿಗೆ

## 30'x40' ನಿವೇಶನದ ಹಂಚಿಕೆ

### ಪ್ರಸ್ತಾವಿತ ಡಾ॥ ಶಿವರಾಮ ಕಾರಂತ್ ಬಡಾವಣೆಯಲ್ಲಿ

**ಇದೀಗ ರೂಪುಗೊಳ್ಳುತ್ತಿರುವ ಡಾ॥ ಶಿವರಾಮ ಕಾರಂತ್ ಬಡಾವಣೆ ವ್ಯಾಪ್ತಿಯೊಳಗೆ ಇರುವ ರೆವಿನ್ಯೂ ನಿವೇಶನಗಳನ್ನು ಪ್ರಸ್ತಾವಿತ ಹೊಸ ಬಡಾವಣೆಗಾಗಿ ವಶಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ, 03.08.2018 ಮುಂಚೆ ಖರೀದಿಸಿದಂತಹ ರೆವಿನ್ಯೂ ನಿವೇಶನದಾರರಿಗೆ 30'x40' ಅಳತೆಯ ನಿವೇಶನಗಳನ್ನು ಹಂಚಿಕೆ ಮಾಡಲು ಬಿಡಿಎ ಪರಿಗಣಿಸಲಾಗುವುದು.**

### ಹಂಚಿಕೆಯ ಪೂರ್ವಾರ್ಹತೆಗಳು

1 ಬಿಡಿಎ ಆವರಣದಲ್ಲಿರುವ ಕೆನರಾ ಬ್ಯಾಂಕ್, ಕೆ.ಪಿ. ವೆಸ್ಟ್, ಬೆಂಗಳೂರು – 560 020 ಇಲ್ಲಿ ನೋಂದಣಿ ಶುಲ್ಕ ರೂ.5000/– ಹಾಗೂ ಅರ್ಜಿ ಶುಲ್ಕ ಒಟ್ಟು ರೂ.500/–ನ್ನು ಪಾವತಿ ಮಾಡಿ, ಅದೇ ಬ್ಯಾಂಕಿನಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಿ.

2 ಅರ್ಜಿಯೊಂದಿಗೆ ರೆವಿನ್ಯೂ ನಿವೇಶನದ ಕ್ರಯ ಪತ್ರದ ಪ್ರತಿಯನ್ನು ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಲಗತ್ತಿಸಿ.

3 ನಿವೇಶನ ಹಂಚಿಕೆ ಪಡೆಯಲು ಅರ್ಹರಾಗಲು ನೀವು ನೋಂದಣಿ ದಿನಾಂಕದ ಹಿಂದಿನ 15 ವರ್ಷಗಳಿಗೂ ಕಡಿಮೆಯಿಲ್ಲದ ಅವಧಿಯವರೆಗೆ ಕರ್ನಾಟಕದ ನಿವಾಸಿಯಾಗಿರಬೇಕು. 18 ವರ್ಷಗಳು ತುಂಬಿರುವ ವ್ಯಕ್ತಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಪಡೆದಿರುತ್ತಾರೆ.

4 ರೆವಿನ್ಯೂ ನಿವೇಶನದಾರರು ಒಂದಕ್ಕಿಂತ ಹೆಚ್ಚು ರೆವಿನ್ಯೂ ನಿವೇಶನಗಳನ್ನು ಹೊಂದಿದ್ದರೂ ಸಹಾ ಅಂತಹ ರೆವಿನ್ಯೂ ನಿವೇಶನದಾರರಿಗೆ 30'x40' ಅಡಿ ಅಳತೆಯ ಒಂದು ನಿವೇಶನವನ್ನು ಮಾತ್ರ ಹಂಚಿಕೆ ಮಾಡಲಾಗುವುದು.

5 ನೀವು ಈ ಹಿಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ/ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಕರ್ನಾಟಕ ಗೃಹ ಮಂಡಳಿ/ಗೃಹ ನಿರ್ಮಾಣ ಸಹಕಾರಿ ಸಂಘಗಳು ಅಥವಾ ಇತರೆ ಏಜೆನ್ಸಿಗಳ ಮೂಲಕ ಈಗಾಗಲೇ ಮಾಲೀಕತ್ವದ ಆಧಾರದಲ್ಲಿ ನಿವೇಶನ/ಮನೆ/ಫ್ಲಾಟ್ಸ್/ಇತರೆ ರೂಪದ ಸ್ಥಳಾವಕಾಶದ ಹಂಚಿಕೆಯನ್ನು ಪಡೆದಿದ್ದಲ್ಲಿ ಈಗ ಮತ್ತೊಮ್ಮೆ ನಿವೇಶನದ ಹಂಚಿಕೆ ಪಡೆಯಲು ಅರ್ಹರಾಗಿರುವುದಿಲ್ಲ.

6 ನೀವು ಬೆಂಗಳೂರು ಮಹಾನಗರ ಪ್ರದೇಶದ ಒಳಗಡೆ ನಿವೇಶನ/ಮನೆ/ಫ್ಲಾಟ್ಸ್/ಇತರೆ ಯಾವುದೇ ರೂಪದ ಸ್ಥಳಾವಕಾಶವನ್ನು ನಿಮ್ಮ ಹೆಸರಿನಲ್ಲಾಗಲೀ ಅಥವಾ ನಿಮ್ಮ ಪತಿ/ಪತ್ನಿಯ ಅಥವಾ ನಿಮ್ಮ ಕುಟುಂಬದ ಇತರೆ ಯಾವುದೇ ಅವಲಂಬಿತರ ಹೆಸರಿನಲ್ಲಾಗಲಿ ಈಗಾಗಲೇ ಹೊಂದಿದ್ದಲ್ಲಿ ಪ್ರಸಕ್ತ ನಿವೇಶನದ ಹಂಚಿಕೆ ಪಡೆಯಲು ಅರ್ಹರಾಗಿರುವುದಿಲ್ಲ.

7 ನೀವು ಸಹಾಯಧನದ ಬೆಲೆಯಲ್ಲಿ ಕರ್ನಾಟಕ ಅಥವಾ ಭಾರತದ ಯಾವುದೇ ಭಾಗದಲ್ಲಿ ಈಗಾಗಲೇ ನಿವೇಶನ/ಮನೆಯನ್ನು ಪಡೆದುಕೊಂಡಿದ್ದಲ್ಲಿ ನಿವೇಶನದ ಹಂಚಿಕೆ ಪಡೆಯಲು ಅರ್ಹರಾಗಿರುವುದಿಲ್ಲ.

### ಹಂಚಿಕೆದಾರರಿಗೆ ತಿಳುವಳಿಕೆ

1 ನಿವೇಶನದ ಅಳತೆ 30'x40'ಗೆ ಮಾತ್ರ ಸೀಮಿತವಾಗಿರುತ್ತದೆ.

2 ಹಂಚಿಕೆಯಾದ ಕೂಡಲೆ, ಹಂಚಿಕೆದಾರರು ನಿವೇಶನದ ಪೂರ್ಣ ಮೌಲ್ಯವನ್ನು ಪಾವತಿಮಾಡತಕ್ಕದ್ದು.

3 ಯಾವುದೇ ಮಧ್ಯವರ್ತಿಗಳ ನೆರವಿಲ್ಲದೆ ನೇರವಾಗಿ ಬಿಡಿಎ ಹಂಚಿಕೆ ವಿಭಾಗವನ್ನು ಸಂಪರ್ಕಿಸಿ.

**ನಿವೇಶನ ಹಂಚಿಕೆಗಾಗಿ ಪ್ರಾರಂಭಿಕ ಠೇವಣಿ ಭರಿಸುವ ಅಗತ್ಯವಿಲ್ಲ.**

*ಬಿಡಿಎ ನಿವೇಶನಗಳ ಹಂಚಿಕೆ ನಿಯಮ, 1984 ಅನ್ವಯಿಸುವುದು.

**ರೆವಿನ್ಯೂ ನಿವೇಶನಗಳ ಜಿಪಿಎ ಅಥವಾ ಕರಾರು ಪತ್ರವನ್ನು ಹೊಂದಿರುವವರು ಈ ಹಂಚಿಕೆಗೆ ಅರ್ಹರಾಗಿರುವುದಿಲ್ಲ.**

**ಭರ್ತಿ ಮಾಡಿದ ಅರ್ಜಿಗಳನ್ನು 09.08.2021 ರಂದು ಅಥವಾ ಅದಕ್ಕೂ ಮುಂಚೆ ಸಲ್ಲಿಸಿ**



**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**

ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.